# <u>ಪತ್ರಿಕಾ ಪ್ರಕಟಣೆಗಾಗಿ</u>

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಅಧಿಕಾರಿ/ನೌಕರರ ಹೆಸರುಗಳನ್ನು ದುರ್ಬಳಕೆ ಮಾಡಿಕೊಂಡು ವಿವಿಧ ಇಲಾಖೆಯ ಅಧಿಕಾರಿ/ನೌಕರ ವರ್ಗದವರಿಗೆ ಕರೆ ಮಾಡಿ, ಲೋಕಾಯುಕ್ತ ಸಂಸ್ಥೆಯಲ್ಲಿ ಪ್ರಕರಣವನ್ನು ದಾಖಲಿಸದಿರಲು ಹಾಗೂ ಈಗಾಗಲೇ ದಾಖಲಾಗಿರುವ ಪ್ರಕರಣವನ್ನು ಮುಕ್ತಾಯಗೊಳಿಸಿಕೊಡುತ್ತೇವೆಂದು ಹೇಳಿ ಹಣಕ್ಕೆ ಬೇಡಿಕೆ ಇಡುತ್ತಿರುವ ಪ್ರಕರಣಗಳು ವ್ಯಾಪಕವಾಗಿ ಹರಡುತ್ತಿದ್ದು, ಈ ವಿಷಯವು ಲೋಕಾಯುಕ್ತ ಸಂಸ್ಥೆಯ ಗಮನಕ್ಕೂ ಸಹಾ ಬಂದಿರುತ್ತದೆ. ಈ ಬಗ್ಗೆ ಲೋಕಾಯುಕ್ತ ಸಂಸ್ಥೆಯು ಸ್ಪಷ್ಟನೆ ನೀಡುತ್ತಿದ್ದು, ಈ ಸಂಸ್ಥೆಯಿಂದ ಯಾರೊಬ್ಬರೂ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದು ವೇಳೆ ಯಾರಿಗಾದರೂ ಈ ರೀತಿಯ ಕರೆ ಬಂದರೆ ತಕ್ಷಣ ಲೋಕಾಯುಕ್ತ ಸಂಸ್ಥೆಯ ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಅಥವಾ ಇ-ಮೇಲ್ ಮೂಲಕ ಈ ಸಂಸ್ಥೆಯ ಗಮನಕ್ಕೆ ತರುವಂತೆ ತಿಳಿಸಲಾಗುತ್ತಿದೆ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು ಮತ್ತು ಹುದ್ದೆ: ಶ್ರೀಯುತ | ದೂರವಾಣಿ ಸಂಖ್ಯೆ | ಇ-ಮೇಲ್ ವಿಳಾಸ |
|---|---|---|---|
| 1 | ಎಂ. ಚಂದ್ರಶೇಖರ ರೆಡ್ಡಿ, ನಿಬಂಧಕರು | 94484 77772 | **kla-reg@nic.in** |
| 2 | ಕೆ. ಶ್ರೀನಾಥ್, ಗೌ.ಲೋಕಾಯುಕ್ತರ ಕಾರ್ಯದರ್ಶಿಗಳು | 96323 45466 | **kla-secretary@ka.gov.in** |
| 3 | ಸರವಣನ್ .ಕೆ, ಉಪ ನಿಬಂಧಕರು (ಆಡಳಿತ-1) | 99459 16758 | **kla-dra1-ka@gov.in** |

ಇತ್ತೀಚೆಗೆ ಇದೇ ರೀತಿಯ ಪ್ರಕರಣವೊಂದು ಲೋಕಾಯುಕ್ತ ಸಂಸ್ಥೆಯ ಗಮನಕ್ಕೆ ಬಂದ ತಕ್ಷಣ ದಿನಾಂಕ; 18.09.2024ರಂದು ಅನಾಮಧೇಯನ ವಿರುದ್ಧ ವಿಧಾನ ಸೌಧ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 0086/2024 ಪ್ರಕಾರ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

ಸಹಿ/- 21/9

ನಿಬಂಧಕರು,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ದಿ:21.09.2024.